# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1199

ಸದಸ್ಯರ ಹೆಸರು : ಶ್ರೀ.ಅರವಿಂದ ಕುಮಾರ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 23.12.2021

ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿರುವ ಕಾರಂಜಾ ಡ್ಯಾಂ ಕೆಳಗಡೆ ಇರುವ ಜಮೀನಿನಲ್ಲಿ ಮೈಸೂರು ಮಾದರಿಯ ಉದ್ಯಾನವನ ನಿರ್ಮಿಸಲು ಯೋಜನೆ ಮಾಡಿ ಮಂಜೂರಾತಿಗಾಗಿ (ಅನುಮತಿಗಾಗಿ) ಸರ್ಕಾರಕ್ಕೆ ಕಳುಹಿಸಲಾಗಿದೆಯೇ; ಅದು ಯಾವ ಹಂತದಲ್ಲಿದೆ: | ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರವಿರುವ ಕಾರಂಜಾ ಅಣೆಕಟ್ಟನ್ನು ಉನ್ನತ ದರ್ಜೆಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸುವ ರೂ30.68 ಕೋಟಿ ಮೊತ್ತದ ಪ್ರಸ್ತಾವನೆಯು ಕರ್ನಾಟಕ ನೀರಾವರಿ ನಿಗಮದ ಪರಿಶೀಲನಾ ಹಂತದಲ್ಲಿದೆ. |
| ಆ) | ಈ ಮಂಜೂರಾತಿ ನೀಡುವುದು ಯಾವಾಗ; ಅದಕ್ಕೆ ಅಂದಾಜು ವೆಚ್ಚ ನಿಗದಿಪಡಿಸಲಾಗಿದೆಯೇ; | |
| ಇ) | ಈ ಡ್ಯಾಂ ಪ್ರದೇಶದಲ್ಲಿ ಖಾಯಂ ಭದ್ರತೆ ಅವಶ್ಯಕತೆ ಇದ್ದು, ಈ ಬಗ್ಗೆ ಸರ್ಕಾರ ತೆಗೆದಕೊಂಡ ಕ್ರಮವೇನು; | ಕಾರಂಜಾ ಅಣೆಕಟ್ಟಿನ ಭದ್ರತೆಗೋಸ್ಕರ, ಕಾರಂಜಾ ಅಣೆಕಟ್ಟಿನ ಆವರಣದಲ್ಲಿನ ಚಲನವಲನ/ಚಟುವಟಿಕೆಗಳನ್ನು ಅರಿಯಲು ಅಣೆಕಟ್ಟಿನ ಆವರಣದಲ್ಲಿ ಖಾಲಿ ಇದ್ದ ಉದ್ಯಾನವನ ಮತ್ತು ಅಣೆಕಟ್ಟಿನ ಒಡ್ಡಿನ ಪ್ರದೇಶವನ್ನು ಬೆಳಗಿಸಲು ಏರಿಯ ಉದ್ದಕ್ಕೂ 110 LED ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ ಮತ್ತು ಆವರಣದಲ್ಲಿ ಚಲನವಲನ ಮೇಲಿನ ನಿಗಾ ಇಡಲು 11 ಸಿ.ಸಿ. ಕ್ಯಾಮರಾಗಳನ್ನು ವಿವಿಧ ಸ್ಥಳಗಳಲ್ಲಿ ಅಳವಡಿಸಲಾಗಿದೆ.<br>ಪ್ರಸ್ತುತ, ಅಣೆಕಟ್ಟಿನ ಭದ್ರತೆಗಾಗಿ ಪೋಲೀಸ್ ಮಹಾ ನಿರ್ದೇಶಕರು, ಆಂತರಿಕ ಭದ್ರತಾ ವಿಭಾಗ ಕಛೇರಿಯಲ್ಲಿ ನೋಂದಾಯಿಸಿ, ಪರವಾನಗಿ ಪಡೆದ ಅರ್ಹ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಿ, ಸುರಕ್ಷಾ Security Agency, ಇವರೊಂದಿಗೆ ದಿನಾಂಕ:08.09.2021ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಅದರಂತೆ ಸದರಿ ಭದ್ರತಾ ಸಂಸ್ಥೆಯಿಂದ ಅಣೆಕಟ್ಟಿಗೆ ಹಗಲು-ರಾತ್ರಿ ಸರದಿ ಪಾಳಿಯಂತೆ ಭದ್ರತೆ ಒದಗಿಸಲಾಗುತ್ತಿದೆ.<br>ಮುಂದುವರೆದು, ಕಾರಂಜಾ ಅಣೆಕಟ್ಟಿಗೆ ಪೋಲೀಸ್ ಭದ್ರತೆ ವ್ಯವಸ್ಥೆಗಾಗಿ ಈಗಾಗಲೇ ಮಾನ್ಯ ಪೋಲಿಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು ಕರ್ನಾಟಕ ರಾಜ್ಯ ಪೋಲಿಸ್ ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| ಈ) | ಈ ಭದ್ರತೆಗೆ ಮಂಜೂರಾತಿ ನೀಡುವುದು ಯಾವಾಗ; ಇಲ್ಲವಾದಲ್ಲಿ ಅದಕ್ಕೆ ಸೂಕ್ತವಾದ ಕಾರಣ ನೀಡುವುದು? | |

ಸಂಖ್ಯೆ: ಜಸಂಇ 260 ಎಂಎಲ್ಎ 2021

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು.